†ಶ್ರೀ ಡಿ. ಮುನಿಚಿನ್ನಪ್ಪ.—ಸರ್ಕಾರದವರು ಮೊದಲು ಮನೆಗಳನ್ನು ಕಟ್ಟುವುದಕ್ಕೋಸ್ಕರ 400 ರೂಪಾಯಿ ಗ್ರಾಂಟನ್ನು ಕೊಟ್ಟಿದ್ದರು. ಅಮೇಲೆ ಟ್ರಸ್ಟ್ ಬೋರ್ಡಿನವರು ಕಾಲನಿ ಮಾಡಿ ಮನೆಗಳನ್ನು ಕಟ್ಟಿಕೊಟ್ಟರು. ಹಿಂದೆ ಸರ್ಕಾರದವರು ಕಾಲೋನಿಯಲ್ಲಿ ಮನೆ ಕಟ್ಟುವುದಕ್ಕೋಸ್ಕರ ಕೊಟ್ಟಿದ್ದಂತಹ 400 ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದಾರೆ. ಆದ್ದರಿಂದ ಈಗ ಆ 400 ರೂಪಾಯಿಗಳನ್ನು ಕೊಡಬೇಕೆಂದು ಟ್ರಸ್ಟ್ ಬೋರ್ಡಿನವರು ಮನೆಗಳ ಮೇಲೆ ಹಾಕಿದ್ದಾರೆ. ಆ ರೀತಿ 400 ರೂಪಾಯಿಗಳನ್ನು ಟ್ರಸ್ಟ್ ಬೋರ್ಡಿನವರು ಬಡವರ ಮೇಲೆ ಹಾಕಿರುವುದು ತಪ್ಪು ಅಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯ ಹೀಗೆಂದು ಕಾಣುತ್ತದೆ. ಮೊದಲು ಸರ್ಕಾರದವರು ಮಂಜೂರು ಮಾಡಿದ್ದಂತಹ 400 ರೂಪಾಯಿಗಳನ್ನು ಕಳೆದುಕೊಂಡು ಆ ಮನೆಗಳಿಗೆ ದುಡ್ಡನ್ನು ಹಾಕಿ ಎಂದು. ಅದು ಯೋಚನೆ ಮಾಡುವ ಮಾತು.

ಶ್ರೀ ಡಿ. ಮುನಿಚಿನ್ನಪ್ಪ.—ಅಷ್ಟೆ, ತಾವು ಅಷ್ಟಣ್ಣ ಕೊಟ್ಟರೆ ಆಗಬಹುದು. 400 ರೂಪಾಯಿಗಳನ್ನು ಕಳೆದುಕೊಂಡು ಮಿಕ್ಕ ಹಣವನ್ನು ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ.

ಶ್ರೀ ಎಸ್. ನಿಜಲಿಂಗಪ್ಪ.—ಯೋಚನೆ ಮಾಡೋಣ.

ಶ್ರೀ ಜೆ. ಶ್ರೀನಿವಾಸರೆಡ್ಡಿ.—ಆ ಮನೆಗಳನ್ನು ಕಟ್ಟಿ ಎರಡು ವರ್ಷ ಆದಮೇಲೆ ಅವುಗಳನ್ನು ಅರಾಟ್ ಮಾಡಿದ್ದರಿಂದ, ಅವುಗಳನ್ನು ಅರಾಟ್ ಮಾಡುವಾಗ ಆ ಮನೆಗಳಿಗೆ ಬಾಗಿಲು ಮತ್ತು ಹೆಂಚು ಯಾವುದೂ ಇರಲಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆದ್ದರಿಂದ ಆ ಮನೆಗಳಿಗೆ ಕೊಡುವ ಹಣವನ್ನು ಕಡಿಮೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ವರ್ತಮಾನವನ್ನು ಕೊಡುತ್ತಿದ್ದೀರಿ, ಅದನ್ನು ಯೋಚನೆ ಮಾಡುತ್ತೇವೆ.

Rehabilitation of people comes under submersion Area of Hemavathi Project.

*Q.—274. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether the people belonging to submersion are of Hemavathi project have applied for lands for rehabilitation, in Dasanakennur Vijapur Bellame forests areas in Arkalgud taluk and in some other places in Hassan, Holenarasipur, Arsikere and Channarayapatna Taluks of Hassan District long back ;

(*b*) if so, the action they have taken to provide lands and rehabilitate them in time ?

A.—Sri M. V. KRISHNAPPA (Minister for Revenue).—

(*a*) Yes.

(*b*) Action is being taken by the Local Officers.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ, ಹಾಸನ, ಚನ್ನರಾಯಪಟ್ಟಣ ಅರಸೀಕೆರೆ ಮತ್ತು ಹೊಳೆನರಸೀಪುರ ತಾಲ್ಲೂಕುಗಳಲ್ಲಿ ಹೇಮಾವತಿ ಯೋಜನೆಯಿಂದ ಮುಳುಗಡೆಯಾಗತಕ್ಕ ಜನಗಳಿಗೆ ಜಮೀನನ್ನು ಒದಗಿಸಲು ಈಗ ಹಾಲಿ ಇರತಕ್ಕ ಜಮೀನನ್ನು ರಿಜರ್ವ್ ಮಾಡುತ್ತೀರಾ ?

ಶ್ರೀ ಎಂ. ಎ. ಕೃಷ್ಣಪ್ಪ.—ಈಗ ಆ ಪ್ರಾಜೆಕ್ಟ್ ಕೆಲಸ ಪ್ರಾರಂಭವಾಗಿರುವುದರಿಂದ ಆ ಕೆಲಸವನ್ನು ಸರ್ಕಾರದವರು ಮಾಡಬೇಕಾಗುತ್ತದೆ. ಕಾಮನ್ ಏರಿಯಾದಲ್ಲಿ ಚಾನರ್ ಎಲ್ಲೆಲ್ಲಿ ಬರುತ್ತದೆಯೋ ಅಲ್ಲೆಲ್ಲಾ ಇರಿಗೇಟ್ ಆಗುತ್ತದೆ. ಆ ಪ್ರದೇಶದಲ್ಲಿ ನಾಗುವಳಿಗೆ ಯೋಗ್ಯವಾದ ಜಮೀನನ್ನು ರಿಜರ್ವ್‌ಮಾಡಿ ಆ ಯೋಜನೆಯಿಂದ ಮುಳುಗಡೆ ಆಗುವ ರೈತರಿಗೆ ಅದನ್ನು ಕೊಡುವುದಕ್ಕೆ ಪ್ರಿಫರೆನ್ಸ್ ಕೊಡಬೇಕಾಗುತ್ತದೆ. ಅದನ್ನು ಇಷ್ಟರಲ್ಲೇ ಮಾಡುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗ ಅಲ್ಲಿ ನೀರು ಬರುತ್ತದೆ ಎನ್ನುವ ಆಸೆಯಿಂದ ನಿರೀಕ್ಷೆ ಮಾಡಿ ಅಲ್ಲಿರುವ ಜಮೀನನ್ನು ದರಖಾಸ್ತಿನಲ್ಲಿ ಆ ತಾಲ್ಲೂಕುಗಳವರು ಎಲ್ಲರೂ ತೆಗೆದುಕೊಳ್ಳುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಕೂಡಲೆ ಸರ್ಕಾರದವರು ಆ ಜಮೀನನ್ನು ಮುಳುಗಡೆಯಾಗುವ ರೈತರಿಗೆ ವಿಲೇವಾರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಎ. ಕೃಷ್ಣಪ್ಪ.—ಸಾಮಾನ್ಯವಾಗಿ ಹಿಂದೆಯೇ ಇಂತಿಂಥಾ ಪ್ರದೇಶ ಮುಳುಗಡೆಯಾಗುತ್ತದೆ ಎಂದು ಇಂಜಿನಿಯರು ಸರ್ವೆ ಮಾಡಿರುತ್ತಾರೆ. ಅದ್ದರಿಂದ ಮುಳುಗಡೆಯಾಗುವ ರೈತರಿಗೆ ಜಮೀನನ್ನು ವಿಲೇವಾರಿ ಮಾಡುವ ಪ್ರಯತ್ನ ನಡೆಯುತ್ತಿರುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ವಿಚಾರವನ್ನು ಈಗ್ಗೆ ಒಂದು ವರ್ಷದ ಹಿಂದೆಯೇ ಅಲ್ಲಿನ ಜನಗಳು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಮತ್ತು ಆದಷ್ಟು ಜಾಗ್ರತೆ ಆ ಬಗ್ಗೆ ಆರ್ಡರ್ ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡಿದ್ದಾರೆ. ಆದರೂ ಸಹ ಇಲ್ಲಿಯ ವರೆಗೂ ಸರ್ಕಾರದವರು ಆ ಬಗ್ಗೆ ಆರ್ಡರನ್ನು ಮಾಡದೆ ಅದನ್ನು ವಿಳಂಬಮಾಡುವುದಕ್ಕೆ ಕಾರಣವೇನು?

ಶ್ರೀ ಎಂ. ಎ. ಕೃಷ್ಣಪ್ಪ.—ಸಾಧ್ಯವಾದಷ್ಟು ಜಮೀನು ಮುಳುಗಡೆಯಾದ ರೈತರಿಗೆ ರಕ್ಷಣೆಯನ್ನು ಕೊಡುವುದು ಸರ್ಕಾರದವರ ಕರ್ತವ್ಯ. ಅದೇ ರೀತಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮತ್ತು ಸರ್ಕಾರದವರು ಆ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಶ್ರೀಮಾನ್ ತಿಮ್ಮಪ್ಪಗೌಡರು ಹೇಳಿದಹಾಗೆ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಜನಗಳು ಏನು ಮಾಡುತ್ತಿದ್ದಾರೆ ಎಂದರೆ, ಸರ್ಕಾರದವರನ್ನು ಹೇಳದೆ ಕೇಳದೆ ಒತ್ತುವರಿ unauthorised ವ್ಯವಸಾಯ ಮಾಡುತ್ತಿದ್ದಾರೆ. ಜನಸಂಖ್ಯೆ ಬಹಳ ಇರುವ ಸ್ಥಳಗಳಲ್ಲಿ ರೈತರಿಗೆ ಜಮೀನು ಕೊಡುವುದನ್ನು ನಿಲ್ಲಿಸಿದ ಹಾಗಾದರೆ ಉತ್ಪತ್ತಿಗೆ ಕೊರತೆ ಬರುವುದಿಲ್ಲವೇ?

ಶ್ರೀ ಎಂ. ಎ. ಕೃಷ್ಣಪ್ಪ.—ಬಗೆರ್ ಹುಕುಂ ವ್ಯವಸಾಯ ಮಾಡಿರುವ ಜಮೀನನ್ನು ರೈತರಿಗೇ ಕೊಡಬೇಕೆಂಬುದು ಆಗುವುದಿಲ್ಲ. ಅದನ್ನು ಇಪ್ಪೊತ್ತೋ ನಾಳೆಯೋ ತೆಗೆದುಕೊಂಡು ಜಮೀನು ಮುಳುಗಡೆಯಾದ ರೈತರಿಗೆ ಕೊಡುವುದಕ್ಕೆ ಅವಕಾಶವಿದೆ. ಮತ್ತು ಅದರಲ್ಲಿ below certain acreage ಇದ್ದರೆ ಅವನ್ನು ಅವರಿಗೇ ಕೊಡಬಹುದು. 25-30 ಎಕರೆ ಪ್ಲಾಟ್ ಇದ್ದರೆ ಅದನ್ನು ಮುಳುಗಡೆಯಾದ ರೈತರಿಗೆ ರಿಜರ್ವ್ ಮಾಡಬೇಕಾಗಬಹುದು.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಹೇಮಾವತಿ ಯೋಜನೆಯ ಪ್ರದೇಶದಲ್ಲಿ ಇದುವರೆಗೆ ಹಿಡುವಳಿದಾರರಿಗೆ ಸಂಬಂಧಪಟ್ಟಹಾಗೆ ಎಷ್ಟು ಎಕರೆ ಜಮೀನನ್ನು ಅಕ್ವೈರ್ ಮಾಡಿದ್ದೀರಿ, ಮತ್ತು ಆ ರೀತಿ ಅಕ್ವೈರ್ ಮಾಡಿಕೊಂಡ ಹಿಡುವಳಿದಾರರಿಗೆ ಈಗಾಗಲೇ ಪುನರ್‌ವಸತಿಗಾಗಿ ಅವರಿಗೆ ಜಮೀನನ್ನು ಕೊಟ್ಟಿದ್ದೀರಾ ?

ಶ್ರೀ ಎಂ. ಎ. ಕೃಷ್ಣಪ್ಪ.—ಹೇಮಾವತಿ ಪ್ರಾಜೆಕ್ಟಿನಲ್ಲಿ ಮುಳುಗಡೆಯಾಗುವ ಪ್ರದೇಶದಲ್ಲಿರುವ ಜನಗಳ ಪುನರ್ ವಸತಿಗಾಗಿ ಗೊರೂರು ಹತ್ತಿರ ಕೆಲವು ಲ್ಯಾಂಡ್ಸ್ ಅಕ್ವೈರ್ ಆಗಿದೆ. ಅದಕ್ಕೆ ಸಂಬಂಧಪಟ್ಟಹಾಗೆ ವಿವರಗಳು ಈಗ ನನ್ನ ಹತ್ತಿರ ಇಲ್ಲ. ಬೇಕಾದರೆ ಅದನ್ನು ಮಾನ್ಯ ಸದಸ್ಯರಿಗೆ ತರಿಸಿ ಕೊಡುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ನಾಗಮಂಗಲ ತಾಲ್ಲೂಕಿಗೆ ಹೇಮಾವತಿ ನದಿಯ ನೀರು ಬರುವುದಿಲ್ಲ. ಅಲ್ಲಿ ಬಹಳ ಬಡವರು ಇದ್ದಾರೆ. ಅದ್ದರಿಂದ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿರುವ ಬೆಳ್ಳಾಮೇ ಕಾವಲಿನಲ್ಲಿ ರಿಜರ್ವ್ ಮಾಡಿರುವ ಜಮೀನನ್ನು ಅವರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಎ. ಕೃಷ್ಣಪ್ಪ.—ಈಗ ಸಧ್ಯೆಯಮುಂದೆ ಇರುವ ಪ್ರಶ್ನೆ ಹೇಮಾವತಿ ಯೋಜನೆಯಲ್ಲಿ ಮುಳುಗಡೆಯಾದ ರೈತರಿಗೆ ಜಮೀನನ್ನು ಕೊಡುವುದಕ್ಕೆ ಸಂಬಂಧಪಟ್ಟದ್ದು. ಈಗ ಜಮೀನು ಕಳೆದುಕೊಂಡವರಿಗೆ ಮೊದಲು ಜಮೀನು ಕೊಟ್ಟಮೇಲೆ ಬೇರೆಯವರ ವಿಚಾರವನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಯೋಜನೆಯಲ್ಲಿ ಮುಳುಗಡೆಯಾಗುವ ರೈತರಿಗೆ ಪುನರ್ ವಸತಿ ನಿರ್ಮಿಸತಕ್ಕ ಬಗ್ಗೆ ಇರತಕ್ಕ ಜಮೀನನ್ನು ರಿಜರ್ವ್ ಮಾಡತಕ್ಕದ್ದು ಸ್ವಾಗತಾರ್ಹವಾದ್ದು.

ರುಗೆ ಯೋಚನೆ ಏರಿಯಾದಲ್ಲಿರತಕ್ಕ ಜಮೀನನ್ನು ಜಮೀನು ಇಲ್ಲದೇ ಇರುವವರಿಗೂ ಮತ್ತು ಹರಿಜನರಿಗೂ 30 ಪರ್ಸೆಂಟ್ ಜಮೀನನ್ನು ಕೊಟ್ಟು ಇನ್ನು ಉಳಿದ 70 ಪರ್ಸೆಂಟ್ ಜಮೀನನ್ನು ಮುಳುಗಡೆಯಾದ ರೈತರಿಗೆ ಕೊಡುವುದಕ್ಕೆ ಸರ್ಕಾರ ನಿರ್ಣಯ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಭದ್ರಾವತಿ ಮತ್ತು ತರೀಕೆರೆ ಮುಂತಾದ ಪ್ರದೇಶದಲ್ಲಿರುವ ಯೋಜನೆಯಿಂದ ಮುಳುಗಡೆಯಾಗತಕ್ಕ ಪ್ರದೇಶದಲ್ಲಿನ ಜನರ ಪುನರ್ವಸತಿಗಾಗಿ ಜಮೀನು ಕೊಡುವುದಕ್ಕೆ ಒಂದು ಪರ್ಸೆಂಟೇಜ್ ನಿಗದಿ ಮಾಡುತ್ತೇವೆ. ಮತ್ತು ಲೋಕಲ್ ಏರಿಯಾದಲ್ಲಿರತಕ್ಕ ಜಮೀನು ಇಲ್ಲದೇ ಇರತಕ್ಕವರಿಗೆ ಜಮೀನು ಹಂಚುವುದಕ್ಕೆ ಒಂದು ಪರ್ಸೆಂಟೇಜ್ ನಿಗದಿಮಾಡಿ ಆ ಪ್ರಕಾರ ಅವರಿಗೆ ಜಮೀನು ಹಂಚುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಹೇಮಾವತಿ ಯೋಜನೆಯಿಂದ ಮುಳುಗಡೆಯಾಗುವ ಪ್ರದೇಶಗಳಲ್ಲಿನ ರೈತರಿಗೆ ಪುನರ್ವಸತಿ ನಿರ್ಮಾಣ ಮಾಡುವ ಸಲುವಾಗಿ ಬೆಲ್ಲಾಮೆ, ದಾಸನ ಕೆನ್ನೂರು ಮತ್ತು ಎಡಾಪುರದಲ್ಲಿರತಕ್ಕ ಕಾವಲುಗಳನ್ನು ರಿಲೀಜ್ ಮಾಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾವಲುಗಳನ್ನು ಇದುವರೆಗೆ ರಿಲೀಜ್ ಮಾಡಿಲ್ಲ. ಈಗ ಯೋಜನೆಗಳಲ್ಲಿ ಮುಳುಗಡೆಯಾಗುವ ರೈತರಿಗೆ ಜಮೀನು ಕೊಡುವುದಕ್ಕೆ ಕೆಲವು ಕಾವಲುಗಳನ್ನು ರೀಲೀಸ್ ಮಾಡುವ ಯೋಜನೆ ಮಾಡುತ್ತೇವೆ.

Development of Inland Fisheries.

*Q.—311. Sri B. BYRAPPAJI (Turuvekere).—

Will the Government be pleased to state :—

(*a*) what is the amount spent for the development of Inland Fisheries in the State from last three years and the area found to be suitable for fish culture ;

(*b*) what is the amount spent for development of Marine Fisheries in the State from last three years and the area found to be suitable for fish culture ;

(*c*) what are the steps taken by the Government towards fish seed production ;

(*d*) whether they are aware that proper steps are not taken to improve the inland fish culture in the State ?

A.—Sri B. RACHAIAH (Minister for Forest and Fisheries).—

(*a*) 1962-63 ... Rs. 3.09 lakhs
1963-64 ... Rs. 6.84 lakhs
1964-65 ... Rs. 6.07 lakhs

Suitable areas are being surveyed.

(*b*) 1962-63 ... Rs. 34.51 lakhs
1963-64 ... Rs. 34.62 lakhs
1964-65 ... Rs. 34.25 lakhs

No fish culture is done in the Sea.

(*c*) Nurseries and rearing farms have been established.

(*d*) No.